೩. ರಾಜ್ಯದ ಪೌರ ಸೇವಾ ನೌಕರರ ಬೇಡಿಕೆಗಳು

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಪೌರ ಸೇವಾ ನೌಕರರ ಸಂಘದವರು ಪೌರ ಸೇವಾ ನೌಕರರಿಗೆ ಸಂಬಂಧಿಸಿದಂತೆ ಈ ಹಿಂದೆ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿದ್ದು ಈ ಬಗ್ಗೆ ೬-೩-೮೬ರಂದು ರಾಜ್ಯಾದ್ಯಂತ ಮುಷ್ಕರವನ್ನು ಪ್ರಾರಂಭಿಸಿ ಆನಂತರ ಪೌರಾಡಳಿತ ಸಚಿವರ ಸಮಕ್ಷಮದಲ್ಲಿ ಆದ ಸಂಧಾನದಂತೆ ಮುಷ್ಕರವನ್ನು ಹಿಂತೆಗೆದು ಕೊಂಡಿದ್ದು ಆಲಾಗಾಯ್ತು ಅವರ ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದೆ. ಅವರ ಹಲವಾರು ಬೇಡಿಕೆಗಳನ್ನು ಅದರಲ್ಲೂ ಮುಖ್ಯವಾಗಿ ಪೌರ ಸೇವಾ ನೌಕರರಿಗೆ ಕೆ.ಸಿ.ಎಸ್.ಆರ್. ಅನ್ನು ಅನ್ವಯ ಮಾಡಬೇಕೆಂಬ ಅವರ ಪ್ರಾಮುಖ್ಯ ಬೇಡಿಕೆಯನ್ನು ಶೀಘ್ರವಾಗಿ ಈಡೇರಿಸುವುದಾಗಿ ಸರ್ಕಾರ ಈ ಹಿಂದೆ ಭರವಸೆ ನೀಡಿದ್ದು ಈವರೆಗೂ ಕಾರ್ಯಗತ ಆಗಿರುವುದಿಲ್ಲ. ಮತ್ತೆ ಮತ್ತೆ ಈ ಬೇಡಿಕೆಗಳ ಬಗ್ಗೆ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದವರು ಸರ್ಕಾರದವರನ್ನು ಒತ್ತಾಯಿಸುತ್ತಿದ್ದು ಈವರೆಗೂ ಬೇಡಿಕೆಗಳನ್ನು ಈಡೇರಿಸುವುದರಿಂದ ತುಂಬಾ ಹತಾಶರಾಗಿ ದಿನಾಂಕ ೫-೨-೯೯೭ರಿಂದ ಪುನಃ ಮುಷ್ಕರದಲ್ಲಿ ಹೋಗುವ ನಿರ್ಧಾರವನ್ನು ಮಾಡಿ ಸರ್ಕಾರಕ್ಕೆ ಈ ಬಗ್ಗೆ ತಿಳಿವಳಿಕೆ ನೀಡಿರುತ್ತಾರೆ. ಸರ್ಕಾರ ಪೌರ ಸೇವಾ ನೌಕರರ ಬಹುಪಾಲು ಬೇಡಿಕೆಗಳನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದು ಈ ಬಗ್ಗೆ ಹೊರಡಿಸಬೇಕಾದ ಆಜ್ಞೆಗಳು ವಿಳಂಬವಾಗಿರುವುದು ತುಂಬಾ ವಿಷಾದಕರ. ದಿನಾಂಕ ೫-೨-೯೭ರಿಂದ ಪೌರ ಸೇವಾ ನೌಕರರು ರಾಜ್ಯಾದ್ಯಂತ ಮುಷ್ಕರದಲ್ಲಿ ತೊಡಗಿದಲ್ಲಿ ಆದರಿಂದಾಗಿ ಪಟ್ಟಣ ಹಾಗೂ ನಗರ ಪ್ರದೇಶಗಳ ನೈರ್ಮಲ್ಯಕ್ಕೆ ಹಾಗೂ ಆರೋಗ್ಯಕ್ಕೆ ತೀವ್ರ ಧಕ್ಕೆ ಒದಗುವ ಸಂಭವವಿರುವುದರಿಂದ ಸರ್ಕಾರ ಪೌರ ಸೇವಾ ನೌಕರರ ಬೇಡಿಕೆಗಳನ್ನು ಈಡೇರಿಸಿ ಈ ಬಗ್ಗೆ ಅಗತ್ಯ ಆಜ್ಞೆಗಳನ್ನು ತಕ್ಷಣ ಹೊರಡಿಸಿ ಉದ್ದೇಶಿತ ಮುಷ್ಕರವನ್ನು ಅವರು ಕೈಬಿಡುವಂತೆ ಮನವೊಲಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಆಹಾರ ಮತ್ತು ಅರಣ್ಯ ಹಾಗೂ ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಅವರು ಮುಷ್ಕರ ಹೂಡಬೇಕಾಗಿಲ್ಲ. ಸನ್ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದೇ ಪ್ರಕಾರ ಸರ್ಕಾರಿ ಆಜ್ಞೆಯನ್ನು ಬೇಗ ಹೊರಡಿಸುತ್ತೇವೆ. ನಿನ್ನೆ ವಿಚಾರ ಮಾಡಿದ್ದೇವೆ. ಬೇಗ ಹೊರಡಿಸುತ್ತೇವೆ.

೪. ಮಂಗಳೂರಿನ ಹೊಯ್ಗೆ ಬಜಾರಿನಲ್ಲಿ ಶೋಲ್ ಯಾರ್ಡ್‌ನಲ್ಲಿ ಉಂಟಾದ ಬೆಂಕಿ ಅಪಘಾತದ ಬಗ್ಗೆ

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಹೊಯ್ಗೆ ಬಜಾರಿನಲ್ಲಿ ಕೆಲವು ದಿವಸಗಳ ಹಿಂದೆ ಅಲ್ಲಿನ ಶೋಲ್ ಯಾರ್ಡಿಗೆ ಬೆಂಕಿ ಬಿದ್ದು ಸುಮಾರು ಒಂದು ಕೋಟಿಗೂ ಮಿಕ್ಕಿ ನಷ್ಟವಾಗಿದೆಯೆಂದು ತಿಳಿದಿದೆ. ಮೀನುಗಾರರ ದೋಣಿಗಳು, ಬಲೆಗಳು ಇನ್ನಿತರ ಸಾಮಗ್ರಿ ಭಸ್ಮವಾಗಿದೆ. ಇದರಿಂದಾಗಿ ಬಡ ಮೀನುಗಾರರು, ಕೆಲಸಗಾರರು ಅನಾಥರಾಗಿರುತ್ತಾರೆ. ಈ ಬಗ್ಗೆ ಬೆಂಕಿಯಲ್ಲಿ ನಷ್ಟಕ್ಕೊಳಗಾದವರಿಗೆ ಸರಕಾರ ಪರಿಹಾರ ಕೊಡುವುದೇ? ಸಂತ್ರಸ್ತರಿಗೆ ಯಾವ ರೀತಿಯ ನೆರವು ನೀಡುವ ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ. ಈ ಕುರಿತು ತು ವಿವರಗಳನ್ನು ಅರಿಯಬೇಕಾಗಿದೆ. ಈ ಕುರಿತು ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮೀನುಗಾರಿಕಾ ಸಚಿವರ ಪರವಾಗಿ ಈ ಉತ್ತರವನ್ನು ಕೊಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಇದಿನಬ್ಬರವರ ೩೩ನೇ ನಿಯಮದ ಮೇರೆಗೆ ಸೂಚನಾ ಪತ್ರದ ಸಂಖ್ಯೆ ೪ರಲ್ಲಿ ಗಮನ ಸೆಳೆದ ವಿಚಾರವಾಗಿ ಕರ್ನಾಟಕ ರಾಜ್ಯ ಸನ್ಮಾನ್ಯ ಸಚಿವರಾದ ಶ್ರೀ ಕೆ.ಎಂ. ಕೃಷ್ಣಾರೆಡ್ಡಿಯವರು ನೀಡಿರುವ ಹೇಳಿಕೆ.

ದಿನಾಂಕ ೧೩-೧-೯೯೭ರಂದು ಮುಂಜಾನೆ ಮಂಗಳೂರು ಹೊಯ್ಗೆ ಬಜಾರ್‌ನಲ್ಲಿರುವ ಮಹಾ ಮೈಸೂರು ಬೋಟ್ ಬಿಲ್ಡಿಂಗ್ ಎಂಟರ್‌ಪ್ರೈಸಸ್ ಹಾಗೂ ಸದ್ರಿ ಸಂಸ್ಥೆಯ ಸಹಭಾಗಿತ್ವದ ಸಂಸ್ಥೆ ವಿಶ್ವ ಕಿರಣ್ ಕಾರ್ಪೊರೇಷನ್ ಎಂಬ ಸಂಸ್ಥೆಗಳಿಗೆ ಸಂಬಂಧಿಸಿದ ದೋಣಿ ನಿರ್ಮಾಣ ಅಂಗಣಗಳಿಗೆ ಉಂಟಾದ ಭೀಕರ ಬೆಂಕಿ ಅನಾಹುತದಿಂದ ದೋಣಿ ನಿರ್ಮಾಣ ಅಂಗಣಗಳ, ಕೆಲವೊಂದು ಭಾಗಗಳೂ